ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 38/2018 ಸಿಡಬ್ಲೂ ಃ 6 ಪಿ ಡಬ್ಲೂ ಃ 4

| | |
|---|---|
| ಹೆಸರು | ರಾಜಶೇಖರ್ |
| ತಂದೆಯ ಹೆಸರು | ವೀರಭದ್ರಪ್ಪ |
| ವಯಸ್ಸು | 33 ವರ್ಷ |
| ವೃತ್ತಿ | ಹೆಚ್ ಸಿ ವೈರ್ ಲೆಸ್, ಕೊಡಗು |
| ವಾಸ | ಕೊಡಗು |

ದಿನಾಂಕಃ 08.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನಾನು 2016 ರಿಂದ ಸೆಪ್ಟಂಬರ್ 2018 ರವೆರೆಗೂಮಂಡ್ಯ ಕಂಟ್ರೋಲ್ ರೂಮಿನಲ್ಲಿ ಪೇದೆ ವೈರ್ ಲೆಸ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕಃ 15.01.2018 ರಂದು ನಾನು ಕರ್ತವ್ಯದಲ್ಲಿದ್ದಾಗ 19.25 ಗಂಟೆಗೆ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆ ಹಾಗೂ ಡಯಲ್ 100 ಇಂದ ವೈರ್ ಲೆಸ್ ಮುಖಾಂತರ ಒಂದು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆಯಾದ ಕೆಎ-40-ಎಫ್-1054 ವಾಹನದ ಚಾಲಕನು ಶ್ರೀರಂಗಪಟ್ಟಣ ಮುಖ್ಯ ರಸ್ತೆಯ ಸಾಯಿ ಮಂದಿರ ಹತ್ತಿರ ಕಲಂ 304(ಎ) ಅಪರಾಧ ಮಾಡಿ ಮಂಡ್ಯ ಕಡೆಗೆ ಬರುವುದಾಗಿ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ನಾನು ಮಂಡ್ಯ ಟೌನ್ ಕಂಟ್ರೋಲ್ ರೂಂ ಹಾಗೂ ಮದ್ದೂರು ಟ್ರಾಫಿಕ್ ಪಿ ಎಸ್ ಗೆ ವೈರ್ ಲೆಸ್ ಮುಖಾಂತರ ವಿಷಯ ತಿಳಿಸಿರುತ್ತೇನೆ. ಅದೇ ದಿನ 19.50 ಗಂಟೆಗೆ ಮಂಡ್ಯ ಟೌನ್ ಕಂಟ್ರೋಲ್ ರೂಮಿನಿಂದ ವೈರ್ ಲೆಸ್ ಮುಖಾಂತರ ಮಂಡ್ಯ ಟೌನ್ ಅಲ್ಲಿ ಮಂಡ್ಯ ಟ್ರಾಫಿಕ್ ಪಿ ಎಸ್-2 ರವರು ಸದರಿ ಕೆ ಎಸ್ ಆರ್ ಟಿ ಸಿ ಬಸ್ ಆದ

ಕೆಎ-40-ಎಫ್-1054 ಅನ್ನು ಡೀಟೈನ್ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಾಹಿತಿಯನ್ನು ಡ್ಯೂಟಿ ಸಿಗ್ನಲ್ ಆಫೀಸರ್ ಮತ್ತು ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಗೆ ತಿಳಿಸಿರುತ್ತೇನೆ. ಸದರಿ ವಿಚಾರದ ಬಗ್ಗೆ ನಾನು ಶ್ರೀರಂಗಪಟ್ಟಣ ಟೌನ್ ಪೋಲಿಸ್ ಗೆ ಹೇಳಿಕೆ ನೀಡಿರುತ್ತೇನೆ. ಕೆ ಎಸ್ ಆರ್ ಸಿ ಬಸ್ ಯಾವ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ ಎಂದು ನನಗೆ ಮಾಹಿತಿ ನೀಡಿರುವುದಿಲ್ಲ.

<u>ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಎನ್ ವಿ ಆರ್ ವಕೀಲರಿಂದಃ</u>

ಘಟನೆಯಾಯಿತು ಎಂದು ಮಾಹಿತಿ ಬಂದಾಗ ನನಗೆ ಕೆ ಎಸ್ ಆರ್ ಟಿ ಸಿ ಯ ನೋಂದಣಿ ಸಂಖ್ಯೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾಗಿದೆ ಎಂದು ತಿಳಿಸಿದ ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ನನಗೆ ತಿಳಿಸಿರುವುದಿಲ್ಲ. ನನಗೆ ಸಂಜೆ 7.25 ಕ್ಕೆ ಘಟನೆಯಾದ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ ಎಂದರೆ ಸರಿ. ದಿಃ 15.01.2018 ರಂದು ಶ್ರೀರಂಗಪಟ್ಟಣದಲ್ಲಿ ಲಕ್ಷದೀಪೋತ್ಸವ ಇತ್ತು ಎಂದರೆ ಸರಿ. ಆದರೆ ಸದರಿ ದಿನದಂದು ಪೊಲೀಸ್ ಗಳನ್ನು ನೇಮಕಾತಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು 1 ರಿಂದ 8 ಗಂಟೆಯ ವರೆಗೂ ಕರ್ತವ್ಯದಲ್ಲಿದ್ದು, ನನಗೆ ಈ ಅಪಘಾತವನ್ನು ಹೊರತುಪಡಿಸಿ ಬೇರೆ ಯಾವುದೇ ಅಪಘಾತ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಅಪಘಾತವು ನಾನು ಹೇಳಿದ ವಾಹನದಿಂದ ಆಗಿಲ್ಲ ಎಂದು ಮಂಡ್ಯ ಪಿ ಎಸ್-2 ಪೊಲೀಸ್ ಠಾಣೆಯವರು ಬಸ್ ಹಾಗೂ ಚಾಲಕನನ್ನು ಬಿಟ್ಟು ಕಳಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಂಡ್ಯ ಪಿ ಎಸ್ -2 ಅವರು ಯಾವುದೇ ಡೀಟೈಲ್ಸ್ ಅನ್ನು ನೋಡದೆ ನನಗೆ ತಪ್ಪು ಮಾಹಿತಿಯನ್ನು ರವಾನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಶ್ರೀರಂಗಪಟ್ಟಣದ ಸಾಯಿ ಮಂದಿರದ ಬಳಿಯೂ ದೀಪಗಳನ್ನು ಭಕ್ತಾದಿಗಳು ಹಚ್ಚುತ್ತಿದ್ದರು ಎಂದರೆ ಸಾಕ್ಷಿ ಅದು ನನಗೆ ಮೌಖಿಕವಾಗಿ ತಿಳಿದಿದೆ. ಸಾಯಿ ಮಂದಿರದ ಬಳಿ ಚೆಕ್ ಪೋಸ್ಟ್ ಇದೆ ಎಂದರೆ ಸರಿಯಲ್ಲ. ಸಾಯಿ ಮಂದಿರದ ಬಳಿ ಚೆಕ್ ಪೋಸ್ಟ್ ಇದ್ದರೂ

ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಕುಟುಂಬಕ್ಕೆ ಪರಿಹಾರ ಸಿಗಲಿ ಎಂಬ ದುರುದ್ದೇಶದಿಂದ ಕೆ ಎಸ್ ಆರ್ ಟಿ ಸಿ ಬಸ್ ನಿಂದ ಅಪಘಾತವಾಗದಿದ್ದರೂ ಸಹ ಬೇರೆ ವಾಹನದಿಂದ ಅಪಘಾತವಾಗಿರುವ ಘಟನೆಯನ್ನು ಕೆ ಎಸ್ ಆರ್ ಟಿ ಸಿ ಚಾಲಕನ ವಿರುದ್ದ ಸುಳ್ಳಾಗಿ ಸೃಷ್ಟಿಸಿ ನನಗೆ ಮಾಹಿತಿ ನೀಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಾನು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಗೆ ಜಿ ಪಿ ಎಸ್ ಇದ್ದ ಕಾರಣ, 19.20 ರ ಸಮಯದಲ್ಲಿ ಬಸ್ ಗಣಂಗೂರು ಬಿಟ್ಟು ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.